## ಕರ್ನಾಟಕ ಸರ್ಕಾರ

ಸಂಖ್ಯೆ:ಗ್ರಾಅಪ 410 ಜಿಪಅ 2012.

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ:11.12.2017

## ಸುತ್ತೋಲೆ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಆನೇಕ ಯೋಜನೆಗಳನ್ನು ಅನುಷ್ಠಾನಗೊಳಸಲಾಗುತ್ತಿದ್ದು ಯೋಜನೆಗಳನ್ನು ಕಾರ್ಯನುಷ್ಠಾನಗೊಳಸಲು ಪ್ರಥಮ ಹಂತದಲ್ಲಿ ಯೋಜನಾ ವರದಿಗಳನ್ನು ತಯಾರಿಸಲು ಸಮಾಲೋಚನಾ ಸಂಸ್ಥೆಗಳೊಂದಿಗೆ ಕರಾರು ಮಾಡಿಕೊಂಡು ವರದಿಯನ್ನು ತಯಾರಿಸಿ ಸಲ್ಲಿಸುವ ವರದಿಗೆ ಪ್ರತಿಯಾಗಿ ಸಂಸ್ಥೆಗಳಗೆ ಸಮಾಲೋಚನಾ ಶುಲ್ಕವನ್ನು ಪಾವತಿಸಲಾಗಿರುತ್ತದೆ. ಈ ರೀತಿ ತಯಾರಿಸಿದ ಎಲ್ಲಾ ಯೋಜನಾ ವರದಿಗಳು ಕಾರಣಾಂತರಗಳಂದ ಅಂದರೆ, ಸಕ್ಷಮ ಪ್ರಾಧಿಕಾರಗಳು, ಅಧಿಕಾರಯುಕ್ತ ಸಮಿತಿ, ಹಾಗೂ ಇನ್ನಿತರ ಪ್ರಾಧಿಕಾರಗಳಂದ ಅನುಮೋದನೆಯಾಗದೇ ಯೋಜನಾ ವರದಿಗಳ ಕಾರ್ಯಾನುಷ್ಠಾನವಾಗದಿರುವುದನ್ನು ಹಾಗೂ ಯೋಜನಾ ವರದಿಯನ್ನು ತಯಾರಿಸಲು ಸಮಾಲೋಚನಾ ಸಂಸ್ಥೆಗೆ ಪಾವತಿಸಿರುವ ಶುಲ್ಕವು ನಿಷ್ಫಲವಾಗಿರುವುದನ್ನು ಸರ್ಕಾರವು ಗಮನಿಸಿರುತ್ತದೆ. ಆದ್ದರಿಂದ, ಇನ್ನು ಮುಂದೆ ಯಾವುದೇ ಯೋಜನೆಗಳಗೆ ಸಂಬಂಧಿಸಿದಂತೆ ವಿವರವಾದ ಯೋಜನಾ ವರದಿ (ಡಿ.ಪಿ.ಆರ್) ತಯಾರಿಸುವ ಸಂದರ್ಭದಲ್ಲಿ ಯೋಜನೆಗಳ ಅನುಷ್ಠಾನಕ್ಕೆ ಲಭ್ಯವಿರುವ ಅನುದಾನ, ಯೋಜನೆಗೆ ತಗಲುಬಹುದಾದ ತಲಾ ವೆಚ್ಚದ **(per capita cost)** ಬಗ್ಗೆ ಸಮಾಲೋಚನ ಸಂಸ್ಥೆಗಳೊಂದಿಗೆ ಪೂರ್ವಭಾವಿ ಚರ್ಚೆ ನಡೆಸಿ, ಸಲ್ಲಿಕೆಯಾಗುವ ಯೋಜನಾ ವರದಿಯು ಕಾರ್ಯಾನುಷ್ಠಾನವಾಗಲು ಸಾಧ್ಯವಿರುತ್ತದೆ ಎಂಬುದನ್ನು ಖಚಿತಪಡಿಸಿಕೊಂಡ ನಂತರವಷ್ಟೆ ಸಮಾಲೋಚನ ಸಂಸ್ಥೆಯೊಂದಿಗೆ ಕರಾರು ಮಾಡಿಕೊಳ್ಳುವಂತೆ ಎಲ್ಲಾ ಸಕ್ಷಮ ಪ್ರಾಧಿಕಾರಗಳಗೂ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ.

(ಡಾ: ಎನ್.ನಾಗಾಂಬಿಕಾ ದೇವಿ)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು,(ಎ ಮತ್ತು ಇ,) ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ,
3. ಆಯುಕ್ತರು, ಗ್ರಾಮೀಣಾ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಕಾವೇರಿ ಭವನ, ಬೆಂಗಳೂರು.
4. ಮುಖ್ಯ ಇಂಜಿನಿಯರ್, ಗ್ರಾಮೀಣಾ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ. ಕಾವೇರಿ ಭವನ.
5. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು
6. ಮುಖ್ಯ ಕಾರ್ಯಾಚರಣೆ ಅಧಿಕಾರಿ, ಕೆ.ಆರ್.ಆರ್.ಡಿ.ಎ, ಬೆಂಗಳೂರು.
7. ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಗೆ.
8. ಪಂಚಾಯತ್ ರಾಜ್ ಇಂಜಿನಿಯರಿಂಗ್ ವೃತ್ತದ ಎಲ್ಲಾ ಅಧೀಕ್ಷಕ ಇಂಜಿನಿಯರ್‌ಗಳಗೆ.
9. ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವೃತ್ತದ ಎಲ್ಲಾ ಅಧೀಕ್ಷಕ ಇಂಜಿನಿಯರ್‌ಗಳಗೆ.
10. ಪಂಚಾಯತ್ ರಾಜ್ ಇಂಜಿನಿಯರಿಂಗ್ ವೃತ್ತದ ಎಲ್ಲಾ ಕಾರ್ಯಪಾಲಕ ಇಂಜಿನಿಯರ್‌ಗಳಗೆ.
11. ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವೃತ್ತದ ಎಲ್ಲಾ ಕಾರ್ಯಪಾಲಕ ಇಂಜಿನಿಯರ್‌ಗಳಗೆ.
12. ಅಂತರಿಕ ಆರ್ಥಿಕ ಸಲಹೆಗಾರರು, ಗ್ರಾ.ಅ.ಪಂ.ರಾಜ್ ಇಲಾಖೆ.
13. ಮಾನ್ಯ ಗ್ರಾ.ಅ.ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರು,
14. ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು. ಗ್ರಾ.ಅ.ಪಂ.ರಾಜ್ ಇಲಾಖೆ.
15. ಜಂಟಿ ಕಾರ್ಯದರ್ಶಿಯವರ ಆಪ್ತ ಸಹಾಯಕರು. ಗ್ರಾ.ಅ.ಪಂ.ರಾಜ್ ಇಲಾಖೆ.
16. ಶಾಖಾ ರಕ್ಷಾ ಕಡತ, ಹೆಚ್ಚುವರಿ ಪ್ರತಿ, ಕಂಪ್ಯೂಟರ್ ಸೆಲ್